The Chairman Selection Committe & Deputy Commissioner
BIDAR

ಕರ್ನಾಟಕ ಸರ್ಕಾರ

# ಗ್ರಾಮಲೆಕ್ಕಾಧಿಕಾರಿಗಳ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ

# ಹಾಗೂ

# ಜಿಲ್ಲಾಧಿಕಾರಿ ಕಛೇರಿ, ಬೀದರ ಜಿಲ್ಲೆ, ಬೀದರ.

## ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013 ರಂತೆ ಸಂವಿಧಾನದ ಅನುಚ್ಛೇದ 371(ಜೆ) ಸ್ಥಳಿಯ ವೃಂದದ ಮತ್ತು ಸ್ಥಳಿಯೇತ್ತರ ವೃಂದದ ಗ್ರಾಮಲೆಕ್ಕಿಗರ ಹುದ್ದೆಯ ನೇರ ನೇಮಕಾತಿ ಸಂಬಂಧ ಮಾಹಿತಿ ಸೂಚಿ

ಸಂ: ಕಂದಾಯ/ಸಿಬ್ಬಂದಿ/ನೇಮಕ/ಸಿಆರ್-01/2018-19 ದಿನಾಂಕ: 03-07-2018

The Chairman Selection Committe & Deputy Commissioner BIDAR

## 371(J) (HK) ಸ್ಥಳಿಯ ವೃಂದದ &
## 371 (J) (Non HK) ಸ್ಥಳಿಯೇತ್ತರ ವೃಂದದ
## ಗ್ರಾಮಲೆಕ್ಕಿಗರ ನೇರ ನೇಮಕಾತಿಗೆ ಸಂಬಂಧಿಸಿದಂತೆ
### ಕ್ಯಾಲೆಂಡರ್ ಆಫ್ ಇವೆಂಟ್ಸ್ (CALENDER OF EVENTS)

| ಕ್ರ. ಸಂ. | ವಿವರ | ದಿನಾಂಕ |
|---|---|---|
| 1 | ಅರ್ಜಿ ಕರೆಯಲು ನಿಗದಿಪಡಿದ ದಿನಾಂಕ | 05.07.2018 |
| 2 | ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 10.08.2018 |
| 3 | ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲು ನಿಗದಿಪಡಿಸಿದ ದಿನಾಂಕ | 18.08.2018 |
| 4 | ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳು ಸಲ್ಲಿಸಲು ನಿಗದಿಪಡಿಸಿದ ದಿನಾಂಕ | 25.08.2018 |
| 5 | ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳು ಇತ್ಯರ್ಥಗೊಳಿಸಲು ನಿಗದಿಪಡಿಸಿದ ಕೊನೆಯ ದಿನಾಂಕ | 30.08.2018 |
| 6 | ತಾತ್ಕಾಲಿಕ ಪಟ್ಟಿಯಂತೆ ಅಭ್ಯರ್ಥಿಗಳು ಮೂಲ ದಾಖಲೆಗಳೊಂದಿಗೆ ಪರಿಶೀಲನೆಗೆ ಜಿಲ್ಲಾಧಿಕಾರಿಗಳ ಕಛೇರಿಗೆ ಹಾಜರಾಗಬೇಕಾದ ದಿನಾಂಕ | 06.09.2018<br>07.09.2018 |
| 7 | ಜಿಲ್ಲಾಧಿಕಾರಿಗಳು ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲು ನಿಗದಿಪಡಿಸಿದ ದಿನಾಂಕ | 14.09.2018 |
| 8 | ವೆಬ್ ಸೈಟ್ ವಿಳಾಸ | http://bidar-va.kar.nic.in |
| 9 | ಸ್ಪಷ್ಟೀಕರಣ/ಮಾಹಿತಿಗಾಗಿ ಸಂಪರ್ಕಿಸಬಹುದಾದ ಹೆಲ್ಪ್ ಲೈನ್ | 08482-229688<br>08482-224491 |
| 10 | ಇ-ಮೇಲ್ ಐಡಿ | estdcbidar1@gmail.com |

## ಬ್ಯಾಂಕ ವಿವರ

| ಬ್ಯಾಂಕ ಹೆಸರು | ಖಾತೆ ಹೊಂದಿದವರ ವಿವರ | ಖಾತೆ ಸಂಖ್ಯೆ |
|---|---|---|
| ಸ್ಟೇಟ್ ಬ್ಯಾಂಕ ಆಫ್ ಹೈದ್ರಾಬಾದ ಬೀದರ | ಅಧ್ಯಕ್ಷರು ಆಯ್ಕೆ ಸಮಿತಿ ಹಾಗೂ ಜಿಲ್ಲಾಧಿಕಾರಿಗಳು ಬೀದರ | 37788624995 |

# ಕಂದಾಯ ಇಲಾಖೆ

## ಜಿಲ್ಲಾಧಿಕಾರಿಯವರ ಕಾರ್ಯಾಲಯ ಬೀದರ ಜಿಲ್ಲೆ, ಬೀದರ

ಸಂ:ಕಂದಾಯ/ಸಿಬ್ಬಂದಿ/ನೇಮಕ/ಸಿಆರ್-01/2018-19 ದಿನಾಂಕ: 03-07-2018

### ಅಧಿಸೂಚನೆ

ಬೀದರ ಜಿಲ್ಲೆಯ ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳ ಪೈಕಿ ಸ್ಥಳಿಯ (HK) ವೃಂದದಲ್ಲಿ - (42) ಹುದ್ದೆಗಳು ಮತ್ತು ಸ್ಥಳಿಯೇತರ (Non-HK) ವೃಂದದಲ್ಲಿ - (11) ಹುದ್ದೆಗಳು ಒಟ್ಟು (53) ಹುದ್ದೆಗಳನ್ನು 2018-19 ನೇ ಸಾಲಿನಲ್ಲಿ ಪರಿಷ್ಕೃತ ನಿಯಮಗಳಂತೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು, ವರ್ಗೀಕರಣ ಮತ್ತು ಮೀಸಲಾತಿ ಅನ್ವಯ ಕರ್ನಾಟಕ ನಾಗರೀಕ ಸೇವೆಗಳು ನಿಯಮ 2 ರ ಮತ್ತು 2009 ರ ಅನ್ವಯ ಹಾಗೂ ಹೈದ್ರಾಬಾದ-ಕರ್ನಾಟಕ ನೇಮಕಾತಿಯಲ್ಲಿ ಮೀಸಲಾತಿ ಆದೇಶ 2013 ರಲ್ಲಿ ನಿರ್ದೇಶಿಸಿದಂತೆ 371(ಜೆ) ರಡಿ ಸ್ಥಳಿಯ ವೃಂದದಲ್ಲಿ ನೇಮಕಾತಿಯನ್ನು ಮಾಡಲು ಪ್ರಾಧಿಕಾರವು ನಿಗಧಿಪಡಿಸಿರುವ ನಮೂನೆಯಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆನ್ ಲೈನ್ ಮೂಲಕ ಅಹ್ವಾನಿಸಲಾಗಿದೆ.

2015-16 ಸಾಲಿನಲ್ಲಿ ಸ್ಥಳಿಯ ವೃಂದ ಮತ್ತು ಸ್ಥಳಿಯೇತ್ತರ ವೃಂದದ ಗ್ರಾಮಲೆಕ್ಕಿಗರ ನೇರ ನೇಮಕಾತಿ ಮಾಡುವ ಸಮಯದಲ್ಲಿ 1 ರಿಂದ 100 ರಲ್ಲಿ ರೋಸ್ಟರ್ ಬಿಂದು (65 ರಿಂದ 25) ರವರೆಗೆ ಆಪರೇಟ ಮಾಡಲಾಗಿರುತ್ತದೆ.

2018-19 ನೇ ಸಾಲಿನಲ್ಲಿ ಸ್ಥಳಿಯ (HK) ವೃಂದದ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು 1 ರಿಂದ 100 ನೇ ರೋಸ್ಟರ್ ಬಿಂದುನಲ್ಲಿ (26 ರಿಂದ 67) ರವರೆಗೆ ಆಪರೇಟ್ ಮಾಡಿ ಹುದ್ದೆಗಳಿಗೆ ವರ್ಗೀಕರಿಸಲಾಗಿದೆ.

2018-19 ನೇ ಸಾಲಿನ ಸ್ಥಳಿಯ ವೃಂದದ ಗ್ರಾಮಲೆಕ್ಕಿಗರ ಒಟ್ಟು (42) ಹುದ್ದೆಗಳ ವರ್ಗೀಕರಣ ಈ ಕೆಳಗಿನಂತೆ ಮಾಡಲಾಗಿದೆ.

**(371 (J) Local Cadre) ಸ್ಥಳಿಯ (HK) ವೃಂದದ ಗ್ರಾಮಲೆಕ್ಕಿಗರ ವರ್ಗೀಕರಣ (ಅನುಬಂಧ-ಅ)**

| ಕ್ರ. ಸಂ. | ಮೀಸಲಾತಿ | ಸಾಮಾನ್ಯ | ಕನ್ನಡ ಮಾಧ್ಯಮ | ಮಹಿಳೆ | ಯೋಜನಾ ನಿರಾಶ್ರಿತರು | ಗ್ರಾಮೀಣ | ಮಾಜಿ ಸೈನಿಕ | ಅಂಗವಿಕಲ | ಒಟ್ಟು |
|---|---|---|---|---|---|---|---|---|---|
| 1 | ಸಾಮಾನ್ಯ | 4 | 1 | 6 | 1 | 6 | 2 | 1 | **21** |
| 2 | ಪ. ಜಾತಿ | 2 | 0 | 2 | 0 | 2 | 1 | 0 | **7** |
| 3 | ಪ. ಪಂಗಡ | 0 | 0 | 1 | 0 | 0 | 0 | 0 | **1** |
| 4 | ಪ್ರವರ್ಗ-1 | 0 | 0 | 1 | 0 | 1 | 0 | 0 | **2** |
| 5 | ಪ್ರವರ್ಗ-2ಎ | 1 | 0 | 2 | 0 | 2 | 1 | 0 | **6** |
| 6 | ಪ್ರವರ್ಗ-2ಬಿ | 0 | 0 | 1 | 0 | 1 | 0 | 0 | **2** |
| 7 | ಪ್ರವರ್ಗ-3ಎ | 0 | 0 | 1 | 0 | 0 | 0 | 0 | **1** |
| 8 | ಪ್ರವರ್ಗ-3ಬಿ | 0 | 0 | 1 | 0 | 1 | 0 | 0 | **2** |
| | ಒಟ್ಟು | **7** | **1** | **15** | **1** | **13** | **4** | **1** | **42** |

The Chairman Selection Committe & Deputy Commissioner BIDAR

2018-19 ನೇ ಸಾಲಿನಲ್ಲಿ ಸ್ಥಳಿಯೇತ್ತರ (Non-HK) ವೃಂದದ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು 1 ರಿಂದ 100 ನೇ ರೋಸ್ಟರ್ ಬಿಂದುನಲ್ಲಿ (68 ರಿಂದ 78) ರವರೆಗೆ ಆಪರೇಟ್ ಮಾಡಿ ಹುದ್ದೆಗಳಿಗೆ ವರ್ಗೀಕರಿಸಲಾಗಿದೆ.

2018-19 ನೇ ಸಾಲಿನ ಸ್ಥಳಿಯ ವೃಂದದ ಗ್ರಾಮಲೆಕ್ಕಿಗರ ಒಟ್ಟು (11) ಹುದ್ದೆಗಳ ವರ್ಗೀಕರಣ ಈ ಕೆಳಗಿನಂತೆ ಮಾಡಲಾಗಿದೆ.

**(Residual Cadre) ಸ್ಥಳಿಯೇತ್ತರ (Non-HK) ವೃಂದದ ಗ್ರಾಮಲೆಕ್ಕಿಗರ ವರ್ಗೀಕರಣ (ಅನುಬಂಧ-ಬಿ)**

| ಕ್ರ. ಸಂ. | ಮೀಸಲಾತಿ | ಸಾಮಾನ್ಯ | ಕನ್ನಡ ಮಾಧ್ಯಮ | ಮಹಿಳೆ | ಯೋಜನಾ ನಿರಾಶ್ರಿತರು | ಗ್ರಾಮೀಣ | ಮಾಜಿ ಸೈನಿಕ | ಅಂಗವಿಕಲ | ಒಟ್ಟು |
|---|---|---|---|---|---|---|---|---|---|
| 1 | ಸಾಮಾನ್ಯ | 1 | 1 | 2 | 1 | 1 | 0 | 0 | **6** |
| 2 | ಪ. ಜಾತಿ | 0 | 0 | 1 | 0 | 0 | 0 | 0 | **1** |
| 3 | ಪ. ಪಂಗಡ | 0 | 0 | 0 | 0 | 1 | 0 | 0 | **1** |
| 4 | ಪ್ರವರ್ಗ-1 | 0 | 0 | 0 | 0 | 0 | 0 | 0 | **0** |
| 5 | ಪ್ರವರ್ಗ-2ಎ | 1 | 0 | 1 | 0 | 0 | 0 | 0 | **2** |
| 6 | ಪ್ರವರ್ಗ-2ಬಿ | 0 | 0 | 0 | 0 | 0 | 0 | 0 | **0** |
| 7 | ಪ್ರವರ್ಗ-3ಎ | 0 | 0 | 0 | 0 | 1 | 0 | 0 | **1** |
| 8 | ಪ್ರವರ್ಗ-3ಬಿ | 0 | 0 | 0 | 0 | 0 | 0 | 0 | **0** |
| | **ಒಟ್ಟು** | **2** | **1** | **4** | **1** | **3** | **0** | **0** | **11** |

1. **ಅರ್ಜಿಯನ್ನು ಸಲ್ಲಿಸುವ ವಿಧಾನ :**

   ಅರ್ಜಿಯನ್ನು ಆನಲೈನ್ (Online) ಅಂತರ್ಜಾಲ (Internet) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು, ಅರ್ಜಿಯನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ. ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

2. **ಅರ್ಜಿ ಶುಲ್ಕ :**

   ಸರ್ಕಾರದ ಸುತ್ತೋಲೆ ಸಂ: ಕಂ.ಇ. 34 ಪ್ರಕಾ 2009, ದಿನಾಂಕ: 26.09.2009 ರಂತೆ

| | |
|---|---|
| ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಪ್ರವರ್ಗ-1/ ಮಹಿಳೆ | ರೂ. 100=00 |
| ಸಾಮಾನ್ಯ/ಪ್ರವರ್ಗ- 2ಎ/2ಬಿ/3ಎ/3ಬಿ | ರೂ. 200=00 |

3. **ಆನ್-ಲೈನ್ (Online) ಮುಖಾಂತರ ಅರ್ಜಿ ಸಲ್ಲಿಸುವ ವಿಧಾನ :**

   ಅಭ್ಯರ್ಥಿಯು ಬೀದರ ಜಿಲ್ಲಾ ಕಂದಾಯ ಘಟಕದ ಅಧಿಕೃತ ವೆಬ್-ಸೈಟ್ (website) http://bidar-va.kar.nic.in ತೆರೆದು ಕಂಪ್ಯೂಟರ್ ಪರದೆಯ ಮೇಲೆ ಅರ್ಜಿಯನ್ನು ತುಂಬಬೇಕು ಹಾಗೂ ಇತ್ತೀಚಿನ ಭಾವ ಚಿತ್ರ ಸ್ಕ್ಯಾನ್ ಮಾಡಿ ಅಪಲೋಡ್ ಮಾಡಬೇಕು ನಂತರ ಅಭ್ಯರ್ಥಿಯು Submit Button ಅನ್ನು ಒತ್ತಿದರೆ ಅರ್ಜಿ ಸಂಖ್ಯೆ (Reference Number) ನೊಂದಿಗೆ (Acknowledgement slip) ಹಾಗೂ ದ್ವಿಪ್ರತಿ ಚಲನ್ ಕಂಪ್ಯೂಟರ್ ಪರದೆ ಮೇಲೆ ಸೃಷ್ಟಿಯಾಗುತ್ತದೆ.

The Chairman Selection Committee & Deputy Commissioner BIDAR

A. ಅರ್ಜಿಗಳನ್ನು **ದಿನಾಂಕ: 05.07.2018 ರಿಂದ 10.08.2018** ರ ಒಳಗೆ ಸಲ್ಲಿಸತಕ್ಕದ್ದು.

B. ಅರ್ಜಿ ಶುಲ್ಕವನ್ನು ದಿನಾಂಕ: 10.07.2018 ರಿಂದ 10.08.2018 ರವರೆಗೆ ರಾತ್ರಿ 11-59 ವರೆಗೆ ಮಾತ್ರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕನ ಖಾತೆ ಸಂಖ್ಯೆ: 37788624995 ಗೆ ಚಾಲನ್ ಮುಖಾಂತರ ಅಥವಾ ಆನಲೈನ ಮುಖಾಂತರ (Online Payment) ಕೈಪಿಡಿಯಲ್ಲಿ ತೋರಿಸಿದ ಹಾಗೆ ಶುಲ್ಕವನ್ನು ಪಾವತಿಸುವುದು.

4. **ಅರ್ಹತಾ ಷರತ್ತುಗಳು :**

ಅ. ಭಾರತೀಯ ನಾಗರೀಕನಾಗಿರತಕ್ಕದ್ದು.

ಆ. ಅಭ್ಯರ್ಥಿಗಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವವಿರುವ ಯಾವುದೇ ದೈಹಿಕ/ಮಾನಸಿಕ ನ್ಯೂನತೆಯಿಂದ ಮುಕ್ತರಾಗಿರತಕ್ಕದ್ದು.

ಇ. ಅಭ್ಯರ್ಥಿಯು ಈ ಹಿಂದೆ ಯಾವುದೇ ಸರ್ಕಾರದ ಸೇವೆಯಿಂದ ವಜಾಗೊಂಡಿರಬಾರದು.

5. **ಶೈಕ್ಷಣಿಕ ವಿದ್ಯಾರ್ಹತೆ :**

ಪದವಿ ಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ನಡೆಸುವ ದ್ವಿತೀಯ ಪಿ.ಯು.ಸಿ. (Pre-university Course) ಅಥವಾ ಸಿ.ಬಿ.ಎಸ್.ಇ. (Central Board Of Secondary education) New Delhi/ ಐ.ಸಿ.ಎಸ್.ಇ (Indian certificate of Secondary education) New Delhi ನಡೆಸುವ 12 ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. (ಗ್ರಾಮಲೆಕ್ಕಿಗರ ಹುದ್ದೆಗೆ ಅರ್ಜಿ ಸಲ್ಲಿಸುವ ದಿನಾಂಕ:05.07.2018 ಕ್ಕೆ ಮುಂಚಿತವಾಗಿ ತೇರ್ಗಡೆ ಹೊಂದಿ ಮೂಲ ಅಂಕಪಟ್ಟಿಯನ್ನು ಪಡೆದುಕೊಂಡಿರತಕ್ಕದ್ದು) ಇತರೆ ಯಾವುದೇ ತತ್ಸಮಾನ (JOC) ವಿದ್ಯಾರ್ಹತೆ ಅಥವಾ ತತ್ಸಮಾನ ಅಲ್ಲದೆ ಯಾವುದೇ ವಿದ್ಯಾರ್ಹತೆ ಪರಿಗಣಿಸುವುದಿಲ್ಲವೆಂದು ಸ್ಪಷ್ಟಪಡಿಸಲಾಗಿದೆ. ಆದಾಗ್ಯೂ ಕೂಡ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಮುನ್ಸೂಚನೆಯನ್ನು ನೀಡದೆ ತಿರಸ್ಕರಿಸಲಾಗುವುದು.

ಗಣಕಯಂತ್ರ ವಿದ್ಯಾರ್ಹತೆ ಹೊಂದಿದ್ದು, Computer Fundamentals MS Windows, MS words, MS Excel, MS Access, Power Point & Internet ಬಗ್ಗೆ ಜ್ಞಾನ ಹೊಂದಿರುವ ಬಗ್ಗೆ ಸರ್ಕಾರದ ಅಂಗೀಕೃತ ಸಂಸ್ಥೆಯಿಂದ ಪ್ರಮಾಣ ಪತ್ರವನ್ನು ಪಡೆದಿರತಕ್ಕದ್ದು. (ಈ ಪ್ರಮಾಣ ಪತ್ರ ನಿಗದಿಪಡಿಸಿರುವ ಕೊನೆಯ ದಿನಾಂಕ: 10.08.2018 ರ ಒಳಗಾಗಿ ಪಡೆದಿರಬೇಕು.)

6. **(1) ವೇತನ ಶ್ರೇಣಿ : -**

21400-500-22400-550-24600-600-27000-650-29600-750-32600-850-36000-950-39800-1100-42000.

**(2) ವಯೋಮಿತಿ :**

ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ: 10.08.2018 ಕ್ಕೆ ಅಭ್ಯರ್ಥಿಯು ಈ ಕೆಳಕಂಡಂತೆ ವಯೋಮಿತಿ ಹೊಂದಿರತಕ್ಕದ್ದು.

a) ಕನಿಷ್ಟ 18 ವರ್ಷ

b) ಗರಿಷ್ಠ ವಯೋಮಿತಿ,

| | |
|---|---|
| ಸಾಮಾನ್ಯ ವರ್ಗ | 35 ವರ್ಷ |
| 2ಎ, 2ಬಿ, 3ಎ, 3ಬಿ | 38 ವರ್ಷ |
| ಪ.ಜಾತಿ/ಪ.ಪಂಗಡ/ಪ್ರವರ್ಗ-1 | 40 ವರ್ಷ |

The Chairman Selection Committee & Deputy Commissioner BIDAR

ಎಸ್.ಎಸ್.ಎಲ್.ಸಿ. ಅಥವಾ ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ.) ಅಥವಾ ಕ್ಯೂಮಿಲೇಟಿವ್ ರೆಕಾರ್ಡ್‌ನಲ್ಲಿ ನಮೂದಿಸಿರುವ ಜನ್ಮ ದಿನಾಂಕವನ್ನು ಆಯ್ಕೆ ಪ್ರಾಧಿಕಾರವು ಪರಿಗಣಿಸುವುದು. ಇತರೆ ಯಾವುದೇ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ. ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 6 ರಂತೆ ವಯೋಮಿತಿಯನ್ನು ಅದರಲ್ಲಿ ತಿಳಿಸಿರುವ ಮಟ್ಟಿಗೆ ಸಂಬಂಧಪಟ್ಟ ದಾಖಲೆ ಒದಗಿಸಿದಲ್ಲಿ ಹೆಚ್ಚಿಸುವ ಬಗ್ಗೆ ಮೂಲ ದಾಖಲೆಗಳ ಪರಿಶೀಲನೆ ವೇಳೆ ಪರಿಶೀಲಿಸಲಾಗುವುದು.

c) ಮಾಜಿ ಸೈನಿಕನಾಗಿರುವ (ಭೂಸೇನೆ, ವಾಯುಸೇನೆ, ನೌಕಾದಳ ಮಾತ್ರ) ಅಭ್ಯರ್ಥಿಯ ಸಂದರ್ಭದಲ್ಲಿ ಮೂರು ವರ್ಷಗಳು ಮತ್ತು ಇದಕ್ಕೆ ಕೇಂದ್ರಕ್ಕೆ ಸಶಸ್ತ್ರ ಪಡೆಗಳಲ್ಲಿ ಅವನು ಸೇವೆ ಸಲ್ಲಿಸಿರುವಷ್ಟು ವರ್ಷಗಳನ್ನು ಸೇರಿಸಬೇಕು.

d) ಪೂರ್ಣಾವಧಿ ಕೆಡೆಟ್ ಇನ್ ಸ್ಟ್ರಕ್ಟರ್ ಎಂದು ಸೇವೆ ಸಲ್ಲಿಸಿದ ತರುವಾಯ, ರಾಷ್ಟ್ರೀಯ ಕೆಡೆಟ್ ದಳದಿಂದ ಬಿಡುಗಡೆ ಮಾಡಿ ಅಭ್ಯರ್ಥಿಯ ಸಂದರ್ಭದಲ್ಲಿ, ಹಾಗೇ ಕೆಡೆಟ್ ಇನಸ್ಟ್ರಕ್ಟರಾಗಿ ಆತನು ಸೇವೆ ಸಲ್ಲಿಸಿರುವಷ್ಟು ವರ್ಷಗಳು.

e) ರಾಜ್ಯ ಸರ್ಕಾರ ಪ್ರಾಯೋಜಿತ ಗ್ರಾಮೀಣ ಕೈಗಾರೀಕರಣ ಯೋಜನೆಯಲ್ಲಿ ನೇಮಕಗೊಂಡ ಗ್ರಾಮ ಸಮೂಹ ಇನ್ಸ್ ಪೆಕ್ಟರಾಗಿ ಆತ ಸೇವೆ ಸಲ್ಲಿಸಿರುವಷ್ಟು ವರ್ಷಗಳು.

f) ಅಂಗವಿಕಲನಾಗಿರುವ ಸಂದರ್ಭದಲ್ಲಿ 10 ವರ್ಷಗಳು.

g) ಅಭ್ಯರ್ಥಿ ವಿಧವೆಯಾಗಿದ್ದಲ್ಲಿ 10 ವರ್ಷಗಳು.

h) ಸಂವಿಧಾನದ ಅನುಚ್ಛೇದ 371(J) ಅರ್ಹತಾ ಪ್ರಮಾಣ ಪತ್ರವನ್ನು ಸಂಬಂಧಿತ ಸಹಾಯಕ ಆಯುಕ್ತರಿಂದ ಪಡೆದಿರತಕ್ಕದ್ದು.

## 7. ಜಾತಿ ಮೀಸಲಾತಿ ಪ್ರಮಾಣ ಪತ್ರಗಳು :

ಅ) ಜಾತಿ ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು ಈ ಕೆಳಕಾಣಿಸಿರುವಂತೆ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು:

a) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಅಭ್ಯರ್ಥಿಗಳು - ನಮೂನೆ-ಡಿ

b) ಪ್ರವರ್ಗ – 1 ರ ಅಭ್ಯರ್ಥಿಗಳು – ನಮೂನೆ – ಇ

c) ಪ್ರವರ್ಗ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳು – ನಮೂನೆ – ಎಫ್

ಸಂಬಂಧಿಸಿದ ತಹಸೀಲ್ದಾರರಿಂದ ಪ್ರಮಾಣ ಪತ್ರವನ್ನು ಪಡೆದಿರಬೇಕು. ಈ ಪ್ರಮಾಣ ಪತ್ರಗಳು ಈ ಹುದ್ದೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: 10.08.2018 ರ ಒಳಗೆ ಪಡೆದಿರಬೇಕು.

ಆ) ಜಾತಿ ಮೀಸಲಾತಿ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಜಾತಿ ಪ್ರಮಾಣ ಪತ್ರದ ಬಗ್ಗೆ ಅಭ್ಯರ್ಥಿಗೆ ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿ, (ಅಧ್ಯಕ್ಷರು ಜಾತಿ ಆದಾಯ ಪರಿಶೀಲನಾ ಸಮಿತಿ) ಇವರಿಂದ ಸಿಂಧುತ್ವ ಪ್ರಮಾಣ ಪತ್ರ ಪಡೆದ ನಂತರ ನೇಮಕಾತಿ ಆದೇಶ ನೀಡಲಾಗುವುದು.

## 8. ಗ್ರಾಮೀಣ ಅಭ್ಯರ್ಥಿ :

a) ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳಂತೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ 01 ರಿಂದ 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿ ಉತ್ತೀರ್ಣರಾಗಿರಬೇಕು.

The Chairman Selection Committee & Deputy Commissioner BIDAR

b) ಗ್ರಾಮೀಣ ಮೀಸಲಾತಿಯನ್ನು ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, 2ಎ, 2ಬಿ, 3ಎ, 3ಬಿ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ನಮೂನೆ-2 ರಲ್ಲಿ ಗ್ರಾಮೀಣ ಮೀಸಲಾತಿ ಪತ್ರವನ್ನು ನಿಗದಿಪಡಿಸಿರುವ ಕೊನೆಯ ದಿನಾಂಕ: 10.08.2018 ರ ಒಳಗಾಗಿ ಪಡೆದಿಟ್ಟುಕೊಂಡಿರಕ್ಕದ್ದು.

c) ಗ್ರಾಮೀಣ ಮೀಸಲಾತಿ ಕೋರುವ ಸಮಾನ್ಯ ವರ್ಗದ ಅಭ್ಯರ್ಥಿಗಳು ನಮೂನೆ – 2 ರ ಮೀಸಲಾತಿ ಪ್ರಮಾಣ ಪತ್ರದ ಜೊತೆಗೆ ನಮೂನೆ-1 ರಲ್ಲಿ ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ತಹಸೀಲ್ದಾರರಿಂದ ನಿಗದಿಪಡಿಸಿರುವ ಕೊನೆಯ ದಿನಾಂಕ: 10.08.2018 ರ ಒಳಗಾಗಿ ಪಡೆದಿರಬೇಕು.

**<u>ಸೂಚನೆ:</u>** ಗ್ರಾಮೀಣ ಮೀಸಲಾತಿಗೆ ಸಂಬಂಧಿಸಿದಂತೆ ನಮೂನೆ – 2 ರಲ್ಲಿನ ಪ್ರಮಾಣ ಪತ್ರವನ್ನು ಅಭ್ಯರ್ಥಿಗಳು ತಾವು ವ್ಯಾಸಂಗ ಮಾಡಿದ ಶಾಲೆಯ ಮುಖ್ಯೋಪಾಧ್ಯಾಯರ ಸಹಿ, ದಿನಾಂಕ ಮತ್ತು ಮೊಹರಿನೊಂದಿಗೆ ಪ್ರಮಾಣ ಪತ್ರವನ್ನು ಪಡೆದು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಪಡೆದಿರತಕ್ಕದ್ದು. (ಈ ಪ್ರಮಾಣ ಪತ್ರ ನಿಗದಿಪಡಿಸಿರುವ ಕೊನೆಯ ದಿನಾಂಕ: 10.08.2018 ರ ಒಳಗಾಗಿ ಪಡೆದಿರಬೇಕು.)

**<u>9. ಕನ್ನಡ ಮಾಧ್ಯಮ ಅಭ್ಯರ್ಥಿ :</u>**

ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು 1 ನೇ ತರಗತಿಯಿಂದ 10 ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಯರ ಸಹಿ, ದಿನಾಂಕ ಮತ್ತು ಮೋಹರಿನೊಂದಿಗೆ ಪ್ರಮಾಣ ಪತ್ರವನ್ನು ಪಡೆದು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಪಡೆದಿರತಕ್ಕದ್ದು. (ಈ ಪ್ರಮಾಣ ಪತ್ರ ನಿಗದಿಪಡಿಸಿರುವ ಕೊನೆಯ ದಿನಾಂಕ: 10.08.2018 ರ ಒಳಗಾಗಿ ಪಡೆದಿರಬೇಕು.)

**<u>10. ಯೋಜನಾ ನಿರಾಶ್ರಿತ ಅಭ್ಯರ್ಥಿಗಳು :</u>**

ಯೋಜನೆಗಳಿಂದ ನಿರಾಶ್ರಿತರಾದ ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳನ್ನು ಕೋರುವ ಅಭ್ಯರ್ಥಿಗಳಿ ಸರ್ಕಾರಿ ಸುತ್ತೋಲೆ ಸಂಖ್ಯೆ: ಸಿಆಸುಇ 44 ಸೇನೆನಿ – 2001 ದಿನಾಂಕ: 27-07-2001 ರಲ್ಲಿ ನಿಗಧಿಪಡಿಸಲಾದ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಸಂಬಂಧ ಪಟ್ಟ ಅಧಿಕಾರಿಯವರಿಂದ ನಿಗಧಿತ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಪಡೆದಿರತಕ್ಕದ್ದು. (ಈ ಪ್ರಮಾಣ ಪತ್ರ ನಿಗದಿಪಡಿಸಿರುವ ಕೊನೆಯ ದಿನಾಂಕ: 10.08.2018 ರ ಒಳಗಾಗಿ ಪಡೆದಿರಬೇಕು.)

**<u>11. ಅಂಗವಿಕಲರ ಮೀಸಲಾತಿ ಅಭ್ಯರ್ಥಿಗಳು :</u>**

ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ನಿಯಮ 9(1-A) ರನ್ವಯ ರಾಜ್ಯ ಸಿವಿಲ್ ಸೇವೆಯಲ್ಲಿನ ಗ್ರೂಪ್-ಸಿ ಹುದ್ದೆಗಳ ನೇರ ನೇಮಕಾತಿಯಲ್ಲಿ ಅಂಗವಿಕಲರಿಗೆ ಶೇಕಡಾ 5% ರಷ್ಟು ಸಮತಳ ಮೀಸಲಾತಿ ಕಲ್ಪಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 128 ಸೇನೆನಿ-2006 ದಿನಾಂಕ: 01-08-2009 ರಂತೆ ಮೀಸಲಾತಿ ನೀಡಲಾಗುವುದು. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 52 ಎಸ್ಎಸ್ಆರ್ 99 ದಿನಾಂಕ: 29-11-2002 ರಂತೆ ಗ್ರಾಮಲೆಕ್ಕಿಗರ ಹುದ್ದೆಗಳಲ್ಲಿ ಅಂಗವಿಕಲರ ಮೀಸಲಾತಿಯನ್ನು ಈ ಕೆಳಕಾಣಿಸಿದ ವರ್ಗಗಳಿಗೆ ಮಾತ್ರ ಕಲ್ಪಿಸಲಾಗಿದೆ.

1. ಕುಷ್ಠ ರೋಗದಿಂದ ಗುಣಮುಖರಾದವರು (Leprosy Cured),
2. ಶ್ರವಣದೋಷವುಳ್ಳವರು (Hearing Impaired),
3. ದೈಹಿಕ ಅಂಗವಿಕಲರು (Loco motor Disability),

The Chairman Selection Committee & Deputy Commissioner BIDAR

4. ಮಾನಸಿಕ ಅಸ್ವಸ್ಥತೆಯಿಂದ ಗುಣಮುಖರಾದವರು (Mentally ill).

ಈ ಮೇಲಿನ ಅಂಗವಿಕಲರು ಹೊರತುಪಡಿಸಿ, ಇತರ ದೈಹಿಕ ಅಂಗವಿಕಲತೆಯುಳ್ಳ, ಅಭ್ಯರ್ಥಿಗಳು ಗ್ರಾಮಲೆಕ್ಕಿಗರ ಹುದ್ದೆಗೆ ಅರ್ಜಿಸಲ್ಲಿಸಲು ಅರ್ಹರಿರುವುದಿಲ್ಲ. ಸರ್ಕಾರದ ಅಧಿಕೃತ ಜ್ಞಾಪನ ಸಂ:ಸಿಆಸುಇ 115 ಸೆನೆಸಿ 2005, ದಿನಾಂಕ: 19-11-2005 ರಲ್ಲಿ ನಿಗಧಿಪಡಿಸಿರುವ ನಮೂನೆಯಲ್ಲಿ ಅಂಗವಿಕಲತೆಯನ್ನು ಬಗ್ಗೆ ಸಂಬಂಧಪಟ್ಟ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯ ನೀಡುವ ಪ್ರಮಾಣ ಪತ್ರವನ್ನು ದಿನಾಂಕ: 10.08.2018 ರ ಒಳಗೆ ಪಡೆದುಕೊಂಡಿರತಕ್ಕದ್ದು. ಬೇರೆ ಯಾವುದೇ ನಮೂನೆಯಲ್ಲಿ ಪಡೆಯಲಾಗಿರುವ ಪ್ರಮಾಣ ಪತ್ರಗಳನ್ನು ಪರಿಗಣಿಸುವುದಿಲ್ಲ.

**ಸೂಚನೆ:** ಈ ಮೇಲಿನ ಎಲ್ಲಾ ಪ್ರಮಾಣ ಪತ್ರಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: 10.08.2018 ರೊಳಗೆ ಅರ್ಹತೆಯನ್ನು ಪಡೆದಿರಬೇಕು. ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿ ಪ್ರಕಟಗೊಂಡ ಅಭ್ಯರ್ಥಿಗಳು ಮಾತ್ರ ನೇಮಕಾತಿ ಪ್ರಾಧಿಕಾರದ ಸೂಚಿಸುವ ದಿನಾಂಕದಂದು ಮೂಲ ಪ್ರಮಾಣ ಪತ್ರಗಳನ್ನು ತಪ್ಪದೇ ಹಾಜರುಪಡಿಸತಕ್ಕದ್ದು. ಮೂಲ ಪ್ರಮಾಣ ಪತ್ರಗಳನ್ನು ಹಾಜರುಪಡಿಸದಿರುವ ಅಭ್ಯರ್ಥಿಗಳ ಅರ್ಜಿಯನ್ನು ಯಾವುದೇ ಸೂಚನೆಯನ್ನು ನೀಡದೆ ತಿರಸ್ಕೃತಗೊಳಿಸಲಾಗುವುದು.

## 12. ಆಯ್ಕೆ ವಿಧಾನ :

ಕರ್ನಾಟಕ ಜನರಲ್ ಸರ್ವೀಸಸ್ (Revenue Subordinate Branch) (Cadre and Recuirtment) (ತಿದ್ದುಪಡಿ) ನಿಯಮಗಳು-2008 ಮತ್ತು 2009 ಹಾಗೂ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು-1977 ರ ಪ್ರಕಾರ ಅಭ್ಯರ್ಥಿಯನ್ನು ದ್ವಿತೀಯ ಪಿ.ಯು.ಸಿ. ಪರೀಕ್ಷೆ ಅಥವಾ CBSE ಅಥವಾ ICSE ನಡೆಸುವ 12 ನೇ ತರಗತಿ ಪರೀಕ್ಷೆಯಲ್ಲಿ ಪಡೆದ ಅಂಕಗಳ (On merit) ಆಧಾರದ ಮೇಲೆ ಆಯಾಯ ಮೀಸಲಾತಿ ಪ್ರವರ್ಗಕ್ಕೆ ಸಂಬಂಧಿಸಿದಂತೆ ಆಯ್ಕೆ ಮಾಡಲಾಗುವುದು.

## 13. ಪ್ರಮುಖ ಸೂಚನೆಗಳು :

ಪ್ರಕಟಗೊಳ್ಳುವ ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿನ ಅಭ್ಯರ್ಥಿಗಳು ಈ ಕೆಳಕಂಡ ಮೂಲ ಪ್ರಮಾಣ ಪತ್ರಗಳನ್ನು ನಿಗಧಪಡಿಸಿದ ದಿನಾಂಕದಂದು ಪರಿಶೀಲನೆಗೆ ಹಾಜರುಪಡಿಸತಕ್ಕದ್ದು ಹಾಗೂ ಮೂಲ ಪ್ರಮಾಣ ಪತ್ರಗಳನ್ನು ಪತ್ರಾಂಕಿತ ಅಧಿಕಾರಿಯಿಂದ ದೃಢೀಕೃತ ಜೇರಾಕ್ಸ್ ನಕಲನ್ನು ಜೊತೆಯಲ್ಲಿ ಹಾಜರು ಪಡಿಸತಕ್ಕದ್ದು.

- ದ್ವಿತೀಯ ಪಿ.ಯು.ಸಿ. (Pre University Course) ಅಥವಾ CBSE (Central Board Of Secondary Education) ಅಥವಾ ICSE (Indian Certificate of Secondary Education) ನಡೆಸುವ 12 ನೇ ತರಗತಿ ಪರೀಕ್ಷೆಯ ಪ್ರಮಾಣ ಪತ್ರ.
- ಹುಟ್ಟಿದ ದಿನಾಂಕ ಸಮರ್ಥನೆಗಾಗಿ (SSLC) ತೇರ್ಗಡೆ ಪ್ರಮಾಣ ಪತ್ರ ಹಾಗೂ ಕ್ಯೂಮೂಲೇಟಿವ್ ದಾಖಲೆ.
- ಸೇವೆಯಲ್ಲಿರುವ ಅಭ್ಯರ್ಥಿಗಳು ಅವರು ಹಾಲಿ ಸೇವೆಯಲ್ಲಿಸುತ್ತಿರುವ ಸಕ್ಷಮ ಪ್ರಾಧಿಕಾರಿಯಿಂದ ಗ್ರಾಮಲೆಕ್ಕಿಗರ ಹುದ್ದೆಗೆ ಅರ್ಜಿಯನ್ನು ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ (No Objection Certificate) ಪಡೆದಿರಬೇಕು. (ಅನುಬಂಧ-6) (ಈ ಪ್ರಮಾಣ ಪತ್ರ ನಿಗದಿಪಡಿಸಿರುವ ಕೊನೆಯ ದಿನಾಂಕ: 10.08.2018 ರ ಒಳಗಾಗಿ ಪಡೆದಿರಬೇಕು.)

The Chairman Selection Committee & Deputy Commissioner
BIDAR

- ❖ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ನಮೂನೆ-ಡಿ) ಮತ್ತು ಪ್ರವರ್ಗ-1 (ನಮೂನೆ-ಇ) ಹಾಗೂ 2ಎ, 2ಬಿ, 3ಎ, 3ಬಿ (ನಮೂನೆ-ಎಫ್) ಪಡೆದಿರತಕ್ಕದ್ದು.
- ❖ ಯೋಜನಾ ನಿರಾಶಿತರ ಕುಟುಂಬಕ್ಕೆ ಸೇರಿದ ಅಭ್ಯರ್ಥಿಗಳು, ವಿಧವೆಯರು, ಜೀತ ಕಾರ್ಮಿಕರು, ಇವರು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ.
- ❖ ಗ್ರಾಮೀಣ ಅಭ್ಯರ್ಥಿ ಮೀಸಲಾತಿ ಪ್ರಮಾಣ ಪತ್ರ.
- ❖ ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ.
- ❖ ಸೈನಿಕ ಸೇವೆಯಿಂದ ಬಿಡುಗಡೆಯಾದ/ ಮುಕ್ತಿ ಹೊಂದಿದ (Discharge Certificate) ಬಗೆಗಿನ ಪ್ರಮಾಣ ಪತ್ರ.
- ❖ ಅಂಗವಿಕಲ ಅಭ್ಯರ್ಥಿಗಳು ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರ.
- ❖ ಕಂಪ್ಯೂಟರ್ ಜ್ಞಾನ (Basic) ಹೊಂದಿರುವ ಬಗ್ಗೆ, ಮಾನ್ಯ ಸರ್ಕಾರದಿಂದ ಮಾನ್ಯತೆ ಪಡೆದ ಕಂಪ್ಯೂಟರ್ ಕೇಂದ್ರ ಪ್ರಮಾಣ ಪತ್ರ ಪಡೆದಿರಬೇಕು.
- ❖ ಅಭ್ಯರ್ಥಿಗಳು ಆನ್ ಲೈನ ಮುಖಾಂತರ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ 371(ಜೆ) ಎಂದು ಆಯ್ಕೆ ಮಾಡಿದ ಅಭ್ಯರ್ಥಿಗಳನ್ನು 371(ಜೆ) ವೃಂದದಡಿಯಲ್ಲಿ ಮಾತ್ರ ಆಯ್ಕೆ ಮಾಡಲಾಗುವುದು ಹಾಗೂ Non-HK 371(ಜೆ) ಆಯ್ಕೆ ಮಾಡಿದ ಅಭ್ಯರ್ಥಿಗಳು Non-HK 371(ಜೆ) ವೃಂದದಡಿಯಲ್ಲಿ ಮಾತ್ರ ಆಯ್ಕೆ ಮಾಡಲಾಗುವುದು.
- ❖ 371(ಜೆ) ವೃಂದದಡಿಯಲ್ಲಿ ಬರುವಂತಹ ಆರು ಜಿಲ್ಲೆಗಳ/ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದು ಮತ್ತು Non-HK 371(ಜೆ) ವೃಂದದಡಿಯಲ್ಲಿ ಸಲ್ಲಿಸುವ ಅರ್ಜಿಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗೆ ಅನ್ವಯವಾಗಿದ್ದು, 371(ಜೆ) ವೃಂದದಡಿಯಲ್ಲಿ ಬರುವಂತಹ ಆರು ಜಿಲ್ಲೆಗಳ ಅಭ್ಯರ್ಥಿಗಳು ಸಹ ಆಯ್ಕೆಗೆ ಅರ್ಜಿ ಸಲ್ಲಿಸಬಹುದು.

  (ಈ ಮೇಲ್ಕಾಣಿಸಿದ ಪ್ರಮಾಣ ಪತ್ರಗಳನ್ನು ಸರ್ಕಾರ ನಿಗಧಿಪಡಿಸಿದ ನಮೂನೆಯಲ್ಲಿ ಅಭ್ಯರ್ಥಿಗಳು ನಿಗಧಿತ ದಿನಾಂಕ: 10.08.2018 ರ ಒಳಗಾಗಿ ಹೊಂದಿರತಕ್ಕದ್ದು, ಹಾಗೂ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಮೇರಿಟ್ ಮೇಲೆ ಆಯ್ಕೆಯಾಗುವ ಅಭ್ಯರ್ಥಿಗಳು ಪರಿಶೀಲನೆಗೆ ನಿಗಧಿಪಡಿಸಿರುವ ದಿನಾಂದಂದು ಹಾಜರಿಪಡಿಸತಕ್ಕದ್ದು.

**<u>14. ಸಾಮಾನ್ಯ ಸೂಚನೆಗಳು :</u>**

- ➢ ನೈತಿಕ ದುರ್ನಡತೆಯಿಂದಾಗಿ/ನೀತಿಬಾಹಿರ ಚಟುವಟಿಕೆಗಳಿಂದಾಗಿ ನ್ಯಾಯಲಯದಿಂದ ಶಿಕ್ಷೆಗೊಳಪಟ್ಟಿರುವ ವ್ಯಕ್ತಿ ಅಥವಾ ರಾಜ್ಯ/ಕೇಂದ್ರ/ಸ್ಥಳೀಯ ಸಂಸ್ಥೆ, ಕಛೇರಿಗಳಲ್ಲಿ ನೈತಿಕ ದುರ್ನಡತೆಯಿಂದಾಗಿ ಅಥವಾ ನೀತಿ ಬಾಹೀರ ಚಟುವಟಿಕೆಗಳಲ್ಲಿ ಒಳಗಾಗಿ ಅಥವಾ ಆಯ್ಕೆಯಾದ ಅಭ್ಯರ್ಥಿಯು ಬದಲಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಾನೂನು ಬಾಹಿರ/ ನೀತಿ ಬಾಹಿರ ಚಟುವಟಿಕೆಗಳಲ್ಲಿ ತೊಡಗಿ ಸೇವೆಯಿಂದ ತೆಗೆದುಹಾಕಿದ್ದಲ್ಲಿ ಸೇವೆಯಿಂದ ವಜಾ ಮಾಡಲ್ಪಟ್ಟಿದ್ದು ಕಂಡುಬಂದಲ್ಲಿ ನೇಮಕಾತಿಗೆ ಅನರ್ಹರಾಗಿರುತ್ತಾರೆ.
- ➢ ಅರ್ಜಿಯಲ್ಲಿ ತಪ್ಪು/ ಸುಳ್ಳು ಮಾಹಿತಿ ನೀಡಿ ಉದ್ಯೋಗ ಪಡೆಯುವ ಪ್ರಯತ್ನ ಮಾಡಿರುವುದು ಪ್ರಾಧಿಕಾರದ ಗಮನಕ್ಕೆ ಬಂದ ತಕ್ಷಣ ಅಂತಹ ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲಾಗುವುದು.

The Chairman Selection Committee & Deputy Commissioner BIDAR

- ಅರ್ಜಿಯಲ್ಲಿ ನೀಡುವ ವಿಳಾಸ ಹಾಗೂ ಮೋಬೈಲ್ ಸಂಖ್ಯೆ ಅಂತಿಮವಾಗಿದ್ದು, ಎಲ್ಲಾ ಪತ್ರ ವ್ಯವಹಾರಗಳನ್ನು ಅದೇ ವಿಳಾಸಕ್ಕೆ ಕಳುಹಿಸಲಾಗುವುದು. ನಂತರದಲ್ಲಿ ವಿಳಾಸ ಬದಲಾವಣೆ ಬಗ್ಗೆ ಯಾವುದೇ ಪತ್ರ ವ್ಯವಹಾರವನ್ನು ಪರಿಗಣಿಸಲಾಗುವುದಿಲ್ಲ.
- ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿಗಳು ಮುನ್ನೆಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಒಮ್ಮೆ ಅರ್ಜಿಯನ್ನು ಸಲ್ಲಿಸಿ ಚಲನ್ ಪ್ರತಿ ಮುದ್ರಿತಗೊಂಡಲ್ಲಿ ಆನಲೈನ್ ಅರ್ಜಿಯಲ್ಲಿ ಆಗಿರುವ ಯಾವುದೇ ತಪ್ಪುಗಳನ್ನು ಸರಿಪಡಿಸಲು ಸಾಧ್ಯವಾಗುವುದಿಲ್ಲ.
- ಒಬ್ಬ ಅಭ್ಯರ್ಥಿ ಒಂದಕ್ಕಿಂತ ಹೆಚ್ಚು ಆನಲೈನ್ ಅರ್ಜಿಗಳನ್ನು ಸಲ್ಲಿಸಿದರೆ ಆ ಅಭ್ಯರ್ಥಿಯು ಕೊನೆಯದಾಗಿ ಸಲ್ಲಿಸಿರುವ ಆನಲೈನ್ ಅರ್ಜಿಗೆ ಶುಲ್ಕವನ್ನು ಪಾವತಿಸಿ, ಚಲನ್ ಅಪಲೋಡ ಮಾಡಿದ್ದಲ್ಲಿ ಅಥವಾ ಆನಲೈನ್ ಮೂಲಕ ಪಾವತಿಸಿದ ಅರ್ಜಿಯನ್ನು ಆಯ್ಕೆ ಪ್ರಕ್ರಿಯೆಯಲ್ಲಿ ಮುಂದುವರಿಸಲಾಗುವುದು. ಹಾಗೂ ಆ ಅಭ್ಯರ್ಥಿಯ ಉಳಿದ ಎಲ್ಲಾ ಆನಲೈನ್ ಅರ್ಜಿಯನ್ನು ತಿರಸ್ಕರಿಸಲಾಗುವುದು.
- ತಾತ್ಕಾಲಿಕ ಪಟ್ಟಿ ಪ್ರಕಟಗೊಂಡ ದಿನಾಂಕದಿಂದ ನಿಗಧಿ ಪಡಿಸಿದ ದಿನಾಂಕ: 25.08.2018 ಒಳಗೆ ಅಭ್ಯರ್ಥಿಗಳಿಂದ ಆಕ್ಷೇಪಣೆ ಸ್ವೀಕರಿಸಲಾಗುವುದು ನಂತರದಲ್ಲಿ ಬಂದ ಆಕ್ಷೇಪಣೆಗಳನ್ನು ತಿರಸ್ಕರಿಸಲಾಗುವುದು.
- ಅಭ್ಯರ್ಥಿಗಳ ಅರ್ಹತೆಯ ವಿಷಯದಲ್ಲಿ ಆಯ್ಕೆ ಪ್ರಾಧಿಕಾರದ ನಿರ್ಧಾರವೇ ಅಂತಿಮವಾಗಿರುತ್ತದೆ.
- ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು http://bidar.nic.in ನಲ್ಲಿ ಪ್ರಕಟಿಸಲಾಗುವುದು. ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಪರಿಶೀಲನೆಗೆ ಹಾಜರಾಗಲು ಪ್ರತ್ಯೇಕವಾಗಿ ಪತ್ರ ವ್ಯವಹಾರ ಈ ಪ್ರಾಧಿಕಾರದಿಂದ ಮಾಡಲಾವುದಿಲ್ಲ. ಅಭ್ಯರ್ಥಿಗಳು ವೆಬಸೈಟ್ ಅನ್ನು ಗಮನಿಸತಕ್ಕದ್ದು.
- ಅಭ್ಯರ್ಥಿಯ ಹೆಸರು ಅಂತಿಮ ಆಯ್ಕೆ ಪಟ್ಟಿಯಲ್ಲಿ ಪ್ರಕಟವಾಗಿದೆ ಎಂಬ ಮಾತ್ರಕ್ಕೆ ಅಭ್ಯರ್ಥಿಗೆ ನೇಮಕಾತಿಯ ಯಾವುದೇ ಹಕ್ಕು ದೊರೆಯುವುದಿಲ್ಲ.
- ಅಭ್ಯರ್ಥಿಯು ಕಾಲೇಜಿನ ಪ್ರಾಂಶುಪಾಲರಿಂದ ಪಡೆದ ಒಂದು ನಡತೆ ಪ್ರಮಾಣ ಪತ್ರ ಹಾಗೂ ಸ್ಥಳೀಯ ಇಬ್ಬರು ಗಣ್ಯ ವ್ಯಕ್ತಿಗಳಿಂದ ಪಡೆದ 6 ತಿಂಗಳೊಳಗಿನ ಇತ್ತೀಚಿನ ನಡತೆ ಪ್ರಮಾಣ ಪತ್ರ ಲಗತ್ತಿಸಬೇಕು.
- ಸರ್ಕಾರದಿಂದ ಆಗಿಂದಾಗ್ಗೆ ನೇರ ನೇಮಕಾತಿಯಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ಹೊರಡಿಸಲಾಗುವ ಸುತ್ತೋಲೆ/ಅಧಿಸೂಚನೆ ಅಥವಾ ಸ್ಪಷ್ಟಿಕರಣಗಳನ್ವಯ ಕ್ರಮವಹಿಸಲಾಗುತ್ತದೆ.
- ಅರ್ಜಿ ತುಂಬುವ ವಿಧಾನ ಹಾಗೂ ಹೆಚ್ಚಿನ ವಿವರಗಳು ಬೀದರ ಜಿಲ್ಲಾಧಿಕಾರಿಗಳ ಕಛೇರಿಯ ಅಧಿಕೃತ ವೆಬಸೈಟ್ http://bidar.nic.in & http://bidar-va.kar.nic.in ರಲ್ಲಿ ಮಾಹಿತಿ ಸೂಚಿಯಲ್ಲಿ ಲಭ್ಯವಿರುತ್ತದೆ ಮತ್ತು ಸ್ಪಷ್ಟೀಕರಣ ಅಗತ್ಯವಿದ್ದಲ್ಲಿ ಸಹಾಯವಾಣಿ ಸಂಖ್ಯೆ: 08482-229688 ಗೆ ಸರ್ಕಾರಿ ರಜೆ ದಿನಗಳನ್ನು ಹೊರತುಪಡಿಸಿ ಉಳಿದಂತೆ ಕಛೇರಿಯ ಕೆಲಸದ ವೇಳೆ ಬೆಳಿಗ್ಗೆ 10-00 ರಿಂದ 5-30 ರ ಒಳಗೆ ಸಂಪರ್ಕಿಸಬಹುದಾಗಿದೆ.
- ಗ್ರಾಮಲೆಕ್ಕಿಗರ ನೇರ ನೇಮಕಾತಿ ಪ್ರಕ್ರಿಯೆ ಪಾರದರ್ಶಕವಾಗಿ ಮೆರಿಟ್ ಮತ್ತು ರೋಸ್ಟರ್ ನಿಯಮಗಳಂತೆ ನಡೆಸಲಿದ್ದು, ಅಭ್ಯರ್ಥಿಗಳು ಯಾವುದೇ ವ್ಯಕ್ತಿಗಳಿಂದ ಹರಡುವ ವದಂತಿಗಳಿಗೆ ಆಮಿಷಗಳಿಗೆ ಕಿವಿಕೊಡದೆ ಮೇಲೆ ತಿಳಿಸಲಾದ ಸೂಚನೆಗಳನ್ನು ಪಾಲಿಸಿ, ಆನಲೈನ್ ಮೂಲಕ ಅರ್ಜಿಯನ್ನು ಸಲ್ಲಿಸತಕ್ಕದ್ದು.

The Chairman Selection Committee & Deputy Commissioner
BIDAR

**ವಿಶೇಷ ಸೂಚನೆ/ಷರತ್ತು:**

ಆಯ್ಕೆಗೊಂಡ ಅಭ್ಯರ್ಥಿಗಳು 5 ವರ್ಷಗಳವರೆಗೆ ಕಡ್ಡಾಯವಾಗಿ ಈ ಜಿಲ್ಲೆಯಲ್ಲಿಯೇ ಸೇವೆ ಸಲ್ಲಿಸಬೇಕು. ಆಯ್ಕೆಗೊಂಡ ಅಭ್ಯರ್ಥಿಗಳ ಮೂಲ ಅಂಕಪಟ್ಟಿ ಹಾಗೂ ಇತರೆ ದಾಖಲೆಗಳು ನೇಮಕಾತಿ ಪ್ರಾಧಿಕಾರದ ವಶದಲ್ಲಿರುತ್ತದೆ. ಅಭ್ಯರ್ಥಿಗಳು ನೇಮಕಗೊಂಡ 5 ವರ್ಷಗಳ ಒಳಗೆ ಯಾವುದೇ ಕಾರಣದಿಂದಾಗಿ ಈ ಜಿಲ್ಲೆಯಿಂದ ಗ್ರಾಮಲೆಕ್ಕಿಗರ ಹುದ್ದೆಗೆ ರಾಜೀನಾಮೆ ಅಥವಾ ಈ ಜಿಲ್ಲೆಯಲ್ಲಿ ನೇಮಕಾತಿ ಹೊಂದಿರುವ ಗ್ರಾಮಲೆಕ್ಕಿಗರ ಹುದ್ದೆಯನ್ನು ಬಿಟ್ಟು ಈ ಜಿಲ್ಲೆಯಿಂದ ಬೇರೆ ಜಿಲ್ಲೆಗೆ ಹೋಗಬೇಕಾದಲ್ಲಿ ರೂ.50000/- (ಐವತ್ತು ಸಾವಿರ ರೂಪಾಯಿಗಳು ಮಾತ್ರ) ದಂಡವನ್ನು ಸಕ್ಷಮ ಪ್ರಾಧಿಕಾರಕ್ಕೆ ಪಾವತಿಸಿದ ನಂತರ ಸೇವೆಯಿಂದ ಬಿಡುಗಡೆಗೊಳಿಸಿ ಮೂಲ ದಾಖಲೆಗಳನ್ನು ಪಡೆದುಕೊಳ್ಳಬಹುದಾಗಿದೆ.

**(ಅನಿರುದ್ಧ್ ಶ್ರವಣ್.ಪಿ.)** ಭಾ.ಆ.ಸೇ.
ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು,
ಗ್ರಾಮಲೆಕ್ಕಿಗರ ನೇರ ನೇಮಕಾತಿ ಪ್ರಾಧಿಕಾರ,
ಬೀದರ ಜಿಲ್ಲೆ, ಬೀದರ.

ಪ್ರತಿಯನ್ನು:

1. ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನ ಸೌಧ, ಬೆಂಗಳೂರು ರವರ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು ರವರ ದಯಾಪರ ಮಾಹತಿಗಾಗಿ ಸಲ್ಲಿಸಲಾಗಿದೆ.
3. ಮಾನ್ಯ ಸರ್ಕಾರದ ಅಧೀನ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು ರವರ ದಯಾಪರ ಮಾಹತಿಗಾಗಿ ಸಲ್ಲಿಸಲಾಗಿದೆ.
4. ಮಾನ್ಯ ಮಹಾಲೇಖಪಾಲಕರು, (ಎ&ಇ) ಕರ್ನಾಟಕ ಬೆಂಗಳೂರು ರವರ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ಪ್ರಾದೇಶಿಕ ಆಯುಕ್ತರು ಕಲಬುರಗಿ/ಮೈಸುರು/ಬೇಳಗಾಂವ/ಬೆಂಗಳೂರು ರವರ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ.
6. ಉಪ ನಿರ್ದೇಶಕರು, ಸರ್ಕಾರಿ ಮುದ್ರಣಾಲಯ ಕಲಬುರಗಿ ರವರಿಗೆ ಕಳುಹಿಸುತ್ತಾ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಅದರ (10) ಪ್ರತಿಗಳನ್ನು ಈ ಕಾರ್ಯಾಲಯಕ್ಕೆ ಕಳುಹಿಸಲು ಕೋರಲಾಗಿದೆ.
7. ಸಹಾಯಕ ಆಯುಕ್ತರು ಬೀದರ/ಬಸವಕಲ್ಯಾಣ ರವರ ಮಾಹಿತಿಗಾಗಿ.
8. ಡಿ.ಐ.ಓ. ಎನ್.ಐ.ಸಿ. ಬೀದರ ರವರಿಗೆ ರವಾನಿಸುತ್ತಾ ವೆಬ್ ಸೈಟ್ ನಲ್ಲಿ ಅಳವಡಿಸಲು ಕೋರಲಾಗಿದೆ.
9. ಜಿಲ್ಲೆಯ ಎಲ್ಲಾ ತಹಸೀಲ್ದಾರ ರವರ ಮಾಹಿತಿಗಾಗಿ ಕಳುಹಿಸುತ್ತಾ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಸಾರ್ವಜನಿಕರ ಮಾಹಿತಿಗಾಗಿ.
10. ಉಪ ನಿರ್ದೇಶಕರು, ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ ರವರಿಗೆ ರವಾನಿಸುತ್ತಾ ಯಾವುದಾದರು ಎರಡು ರಾಜ್ಯ ಮಟ್ಟದ ದಿನಪತ್ರಿಕೆಗಳಲ್ಲಿ ಪ್ರಚಾರ ಪಡಿಸುವಂತೆ ಕೋರಿದೆ.
11. ಹೆಚ್ಚಿನ ಪ್ರತಿ.

The Chairman Selection Committee
Deputy Commissioner
BIDAR